ಓ. ಎಸ್. ನಂ: 54/2008

ಪಿ. ಡಬ್ಲ್ಯೂ: 1

ದಿ:24-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಶ್ರೀ ಎನ್ ಎನ್ ಪಿ ಪ್ರತಿವಾದಿ ನಂ **1,2,4,5** ಪರ ವಕೀಲರಿಂದ :

ನಿಪಿ-7 ರಿಂದ 13 ದಾಖಲಾತಿ ಪಡೆಯಲು ಯಾರು ಅರ್ಜಿ ಕೊಟ್ಟಿದ್ದರು ಮತ್ತು ಯಾರು ತಂದು ಕೊಟ್ಟರು ಎಂದು ಗೊತ್ತಿಲ್ಲ . ಚನ್ನವೀರಗೌಡ, ಶಿವನಗೌಡ , ಫಕ್ಕಿರಗೌಡ ಇವರು ಎ ಸಿ ಮುಂದೆ ಮೇಲ್ಮನವಿ ಸಲ್ಲಿಸಿದ್ದು ಆ ಆದೇಶ ವಿರುದ್ದ ಜಿಲ್ಲಾಧಿಕಾರಿಗಳು ಆ ಆರ ಟಿ ಎಸ್ ಎ ಪಿ ಸಿ ಆರ 9/2022-2023 ತಡೆಯಾಜ್ಞೆ ಆದೇಶ ಮಾಡಿದ್ದಾರೆ ಎಂದರೆ ಗೊತ್ತಿಲ್ಲ.ಪ್ರತಿವಾದಿಯವರು ಹಾಜರುಪಡಿಸಿದ ದಾಖಲಾತಿಯನ್ನು ನೋಡಿ ತಿಳಿದುಕೊಂಡಿದ್ದೀರಾ ಎಂದರೆ ಗೊತ್ತಿಲ್ಲ. ನಿಡಿ-17, 18 ರಂತೆ ಆರ ಟಿ ಎಸ್ ಎ ಪಿ ಸಿ ಆರ 98/2007-2008 ಇದನ್ನು ಎ ಸಿ ಸವಣೂರು ಅವರ ನ್ಯಾಯಾಲಯದಲ್ಲಿ ಮಲ್ಲನಗೌಡ ಸಂಕನಗೌಡ ಪಾಟೀಲ , ಬೋಜನಗೌಡ ಅವರ ವಿರುದ್ದ ಮೇಲ್ಮನವಿ ಸಲ್ಲಿಸಿದ್ದು ಅದನ್ನು ದಿ 13-08-2008 ರಂದು ವಜಾ ಗೊಳಿಸಿದ್ದರು ಎಂದರೆ ಗೊತ್ತಿಲ್ಲ. ರಿಸನಂಬರ 71 ಕ್ಷೇತ್ರ 5 ಎಕರೆ 31 ಗುಂಟೆ ಸಂಬಂದಪಟ್ಟಂತೆ ಮೇಲ್ಮನವಿ ಸಲ್ಲಿಸಿಲ್ಲ. ದಿ 13-08-2008 ರಂದು ಮೇಲ್ಮನವಿ ವಜಾ ಗೊಳಿಸಿದ್ದರು ಎಂದರೆ ಸರಿಯಲ್ಲ. ನಿಡಿ-18 ರಂತೆ ಪಕ್ಕಿರಗೌಡ ,ಶಿವನಗೌಡ ಆರ ಟಿ ಎಸ ಎ ಪಿ ಎಸ್ ಆರ 8/2009 ಎಂದು ಮೇಲ್ಮನವಿಯನ್ನು ಸಲ್ಲಿಸಿದ್ದೆವು ಎಂದರೆ ಸರಿಯಲ್ಲ. ದಿ 10-09-2009 ರಂದು ಜಿಲ್ಲಾದಿಕಾರಿಗಳು ಸಂಪೂರ್ಣ ವಿಚಾರಣೆ ಮಾಡಿ ಮೇಲ್ಮನವಿಯನ್ನು ವಜಾ ಮಾಡಿದ್ದಾರೆ ಎಂದರೆ ಸರಿಯಲ್ಲ . ನಾನು ನ್ಯಾಯಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತಿದ್ದೆನೆ ಎಂದರೆ ಸರಿಯಲ್ಲ. ನಿಡಿ-11 ರ ಪ್ರಕಾರ ಚನ್ನಬಸನಗೌಡ , ಎಲ್ಲನಗೌಡ ಇವರು 22/2008-09 ರಿಸನಂಬರ 71 ಕ್ಕೆ ಸಂಬಂದಪಟ್ಟಂತೆ 10-09-2009 ರಂದು ಡಿ ಸಿ ಅವರು ತಡಯಾಜ್ಞೆ ಮಾಡಿದ್ದಾರೆ ಎಂದರೆ ಸಾಕ್ಷಿಯು 487 ಡ ನಂಬರ ವಜಾ ಮಾಡಿದ್ದಾರೆ . ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತಿದ್ದೆನೆ ಎಂದರೆ

ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲಾತಿಗಳಲ್ಲಿ ಅರ್ಜಿ ಕೊಟ್ಟವರ ಹೆಸರು , ದಿನಾಂಕ ಇಲ್ಲ ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ

**3** ನೇ ಪ್ರತಿವಾದಿ ಮತ್ತು **6** ನೇ ಪ್ರತಿವಾದಿ ಪರ ವಕೀಲರು ಹಾಜರು ಇದ್ದು ಪ್ರತಿವಾದಿ ನಂಬರ **1,2,4,5** ಅವರು ಮಾಡಿದ ಪಾಟಿಸವಾಲನ್ನು ತಾವು ಅಳವಡಿಸಿಕೊಳ್ಳುತಿದ್ದಾರೆ **.**

**7** ರಿಂದ **10** ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರು ಇದ್ದು ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.